# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:05-11-2018 ರಂದು ನಡೆದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಸಭೆಯ ನಡವಳಿಗಳು

| ಹಾಜರಿದ್ದ ಸದ್ಯಸರು ಶ್ರೀಯುತರುಗಳಾದ | | | ಹಾಜರಿದ್ದ ಅಧಿಕಾರಿಗಳು | |
|---|---|---|---|---|
| 1) | ಸಿ.ಆರ್.ಲಕ್ಷ್ಮೀನಾರಾಯಣ್ | ಅಧ್ಯಕ್ಷರು | 1) | ಕೌನ್ಸಿಲ್ ಕಾರ್ಯದರ್ಶಿ |
| 2) | ಹೆಚ್.ಎ.ಕೆಂಪೇಗೌಡ | ಸದಸ್ಯರು | 2) | ಆಯುಕ್ತರ ಕಛೇರಿಯ ವ್ಯವಸ್ಥಾಪಕರು ಹಾಗೂ ವಿಷಯ ನಿರ್ವಾಹಕರು |
| 3) | ಕೆ.ನರಸಿಂಹನಾಯಕ್ | ಸದಸ್ಯರು | | |
| 4) | ಎಂ.ಮಾಲತಿ | ಸದಸ್ಯರು | | |
| 5) | ಎನ್.ಮಂಜುನಾಥ್ | ಸದಸ್ಯರು | | |
| 6) | ಸೀಮಾ ಅಲ್ತಾಫ್ ಖಾನ್ | ಸದಸ್ಯರು | | |
| 7) | ಜಿ.ಕೃಷ್ಣಮೂರ್ತಿ | ಸದಸ್ಯರು | | |

1) **ವಿಷಯದ ಸಂಖ್ಯೆ:ಸಿಆಸುಸ್ಥಾಸ/ವಿ.ಸಂ/41/2018-19**

ಆಯುಕ್ತರವರ ದಿನಾಂಕ:23-10-2018ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ:ನಅಇ 367 ಎಂಎನ್‌ಜಿ 2018, ದಿನಾಂಕ:06-09-2018 ರಲ್ಲಿ ಶ್ರೀ ಜಿ.ಎನ್.ಶ್ರೀನಿವಾಸುಲು, ಸಹಾಯಕ ಅಭಿಯಂತರರು ಇವರನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಎರವಲು ಸೇವೆಯ ಮೇಲೆ ಮರುಸ್ಥಳ ನಿಯುಕ್ತಿಗೊಳಿಸಿ ಆದೇಶಿಸಲಾಗಿತ್ತದೆ.

ಶ್ರೀ ಜಿ.ಎನ್.ಶ್ರೀನಿವಾಸುಲು, ಸಹಾಯಕ ಅಭಿಯಂತರರು ಇವರು ದಿನಾಂಕ:10-10-2018 ರಂದು ಪಾಲಿಕೆಯಲ್ಲಿ ಹಾಜರಾತಿ ಸಲ್ಲಿಸಿ, ಹಾಜರಾತಿಯನ್ನು ಅಂಗೀಕರಿಸುವಂತೆ ಕೋರಿರುತ್ತಾರೆ.

ಪಾಲಿಕೆಯಲ್ಲಿ 291 ಸಹಾಯಕ ಅಭಿಯಂತರರ ಮಂಜೂರಾತಿ ಹುದ್ದೆಗಳಿದ್ದು, ಪ್ರಸ್ತುತ ಪಾಲಿಕೆಯಲ್ಲಿ 179 ಮಂದಿ ಎರವಲು ಸೇವೆಯ ಮೇಲೆ ಮತ್ತು 72 ಮಂದಿ ಪಾಲಿಕೆ ಅಭಿಯಂತರರುಗಳು ಸೇರಿ ಒಟ್ಟು 251 ಮಂದಿ ಸಹಾಯಕ ಅಭಿಯಂತರರುಗಳು ಕಾರ್ಯನಿರ್ವಹಿಸುತ್ತಿರುತ್ತಾರೆ.

ಮುಂದುವರೆದಂತೆ, ಶ್ರೀ ಎಸ್.ಆರ್.ವಿಶ್ವನಾಥ್, ಮಾನ್ಯ ಶಾಸಕರು, ಯಲಹಂಕ ವಿಧಾನಸಭಾ ಕ್ಷೇತ್ರ, ಬೆಂಗಳೂರು ನಗರ ಜಿಲ್ಲೆ ರವರ ಪತ್ರವನ್ನು ತಮ್ಮ ಅವಗಾಹನೆಗೆ ತರುತ್ತಾ, ಸದರಿ ಪತ್ರದಲ್ಲಿ



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

ಶ್ರೀ ಜಿ.ಎನ್.ಶ್ರೀನಿವಾಸಲು, ಸಹಾಯಕ ಅಭಿಯಂತರರು ಇವರನ್ನು ಶ್ರೀಮತಿ ಪ್ರಿಯದರ್ಶಿನಿ ರವರ ಪದೋನ್ನತಿಯಿಂದ ತೆರವಾಗಿರುವ ಯೋಜನೆ–ಯಲಹಂಕ ಕಛೇರಿಗೆ ಸ್ಥಳನಿಯುಕ್ತಿಗೊಳಿಸಲು ಕೋರಿರುತ್ತಾರೆ.

ಶ್ರೀಮತಿ ವಿ.ಸಿ.ಪ್ರಿಯದರ್ಶಿನಿ, ಸಹಾಯಕ ಅಭಿಯಂತರರಾಗಿ ಕಾರ್ಯಪಾಲಕ ಅಭಿಯಂತರರು (ಯೋಜನೆ–ಬ್ಯಾಟರಾಯನಪುರ) ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಇವರು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಹುದ್ದೆಗೆ ಪದೋನ್ನತಿ ಹೊಂದಿರುವ ಮೇರೆಗೆ, ಸದರಿಯವರಿಂದ ತೆರವಾಗಿರುವ ಕಾರ್ಯಪಾಲಕ ಅಭಿಯಂತರರು (ಯೋಜನೆ–ಬ್ಯಾಟರಾಯನಪುರ) ವಿಭಾಗದಲ್ಲಿ ಸಹಾಯಕ ಅಭಿಯಂತರರ ಹುದ್ದೆ ಖಾಲಿ ಇರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆಯಲ್ಲಿ ಶ್ರೀ ಜಿ.ಎನ್.ಶ್ರೀನಿವಾಸಲು, ಸಹಾಯಕ ಅಭಿಯಂತರರು ಇವರನ್ನು ಪಾಲಿಕೆಗೆ ಎರವಲು ಸೇವೆಯ ಮೇಲೆ ನಿಯೋಜಿಸಿ ಆದೇಶಿಸಿದ್ದು, ಈ ಸಂಬಂಧ ಕಡತವನ್ನು ಮಾಹಿತಿ / ಅಭಿಪ್ರಾಯಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ತೀರ್ಮಾನ:**

ಸರ್ಕಾರದ ದಿನಾಂಕ:11-11-2011ರ ನಿಯೋಜನಾ ನೀತಿಯಲ್ಲಿನ ಅಂಶಗಳ ಪ್ರಕಾರ ಸದರಿ ಸಹಾಯಕ ಅಭಿಯಂತರರನ್ನು ನಿಯೋಜಿಸಿರುವ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಬಹುದೆಂಬ ಅಭಿಪ್ರಾಯದೊಂದಿಗೆ ಮಾನ್ಯ ಆಯುಕ್ತರು ರವರ ದಿನಾಂಕ:23-10-2018ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.

## ವಿಷಯದ ಸಂಖ್ಯೆ:ಸಿಆಸುಸ್ಥಾಸ/ವಿ.ಸಂ/42/2018-19

ಆಯುಕ್ತರವರ ದಿನಾಂಕ:22-10-2018ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ) ರವರ ಅಧಿಸೂಚನೆ ಸಂಖ್ಯೆ:ನಅಇ 424 ಎಂಎನ್‌ಜಿ 2018, ದಿನಾಂಕ:25-09-2018ರ ಅಧಿಸೂಚನೆ ಪತ್ರವನ್ನು ಹಾಗೂ ಡಾ॥ ಬಿ.ವೈ.ನಂದ, ವೈದ್ಯಾಧಿಕಾರಿ ರವರು ಸಲ್ಲಿಸಿರುವ ಹಾಜರಾತಿ ಪತ್ರವನ್ನು ತಮ್ಮ ಅವಗಾಹನೆಗೆ ಮಂಡಿಸಿದೆ.



ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

ಸದರಿಯವರ ಅಧಿಸೂಚನೆ ಪತ್ರದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಸೂಚನೆ ಸಂಖ್ಯೆ:ಆಕುಕಾ 213 ಹೆಚ್ಎಸ್ಹೆಚ್ 2018, ದಿನಾಂಕ:10-08-2018 ರಲ್ಲಿ ಡಾ॥ ಬಿ.ವೈ.ನಂದ ವೈದ್ಯಾಧಿಕಾರಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರವರ ಮುಂದಿನ ಸ್ಥಳ ನಿಯುಕ್ತಿಗಾಗಿ ಇವರ ಸೇವೆಯನ್ನು ನಗರಾಭಿವೃದ್ಧಿ ಇಲಾಖೆಯ ವಶಕ್ಕೆ ನೀಡಲಾಗಿದೆ.

ಡಾ॥ ಬಿ.ವೈ.ನಂದ, ವೈದ್ಯಾಧಿಕಾರಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರನ್ನು ಈ ತಕ್ಷಣದಿಂದ ಜಾರಿಗೆ ಬರುವಂತೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಖಾಲಿ ಇರುವ ಆರೋಗ್ಯಾಧಿಕಾರಿ ಹುದ್ದೆಗೆ ಮರುಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿರುತ್ತಾರೆ.

ಪರಿಶೀಲಿಸಲಾಗಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳನ್ವಯ ಆರೋಗ್ಯಾಧಿಕಾರಿ ಹುದ್ದೆಗೆ ಉಪ ಆರೋಗ್ಯಾಧಿಕಾರಿ ಹುದ್ದೆಯಿಂದ ಮುಂಬಡ್ತಿ ಮೂಲಕ ತುಂಬಾ ಬಹುದಾಗಿದ್ದು ಹಾಗೂ ಮುಂಬಡ್ತಿ ಮೂಲಕ ಯಾವುದೇ ವೈದ್ಯಾಧಿಕಾರಿಗಳು ಇಲ್ಲದೇ ಇದ್ದ ಪಕ್ಷದಲ್ಲಿ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಸಹಾಯಕ ನಿರ್ದೇಶಕರ ವೃಂದದಿಂದ ಎರವಲು ಸೇವೆಯ ಮೇಲೆ ತೆಗೆದುಕೊಳ್ಳಲು ಅವಕಾಶವಿರುತ್ತದೆ.

ಆದರೆ, ಡಾ॥ ಬಿ.ವೈ.ನಂದ, ವೈದ್ಯಾಧಿಕಾರಿ ರವರು ಎಂ.ಬಿ.ಬಿ.ಎಸ್. ವಿದ್ಯಾರ್ಹತೆಯನ್ನು ಪಡೆದಿದ್ದು, ಪಾಲಿಕೆಯಲ್ಲಿ ಆರೋಗ್ಯ ವೈದ್ಯಾಧಿಕಾರಿ ಹುದ್ದೆಗೆ ತತ್ಸಮಾನ ಹುದ್ದೆಯಾಗಿರುತ್ತದೆ. ಪಾಲಿಕೆಯ ವೃಂದ ಮತ್ತು ನೇಮಕಾತಿಜಕ ನಿಯಮಾವಳಿಯನ್ವಯ 50% ಎರವಲು ಸೇವೆಯ ಮೇಲೆ ಆರೋಗ್ಯ ವೈದ್ಯಾಧಿಕಾರಿಗಳನ್ನು ತೆಗೆದುಕೊಳ್ಳಲು ಅವಕಾಶವಿರುವುದರಿಂದ ಡಾ॥ ಬಿ.ವೈ.ನಂದ, ವೈದ್ಯಾಧಿಕಾರಿ ರವರನ್ನು ಆರೋಗ್ಯ ವೈದ್ಯಾಧಿಕಾರಿ ಹುದ್ದೆಯಲ್ಲಿ ಎರವಲು ಸೇವೆಯ ಮೇಲೆ ತೆಗೆದುಕೊಳ್ಳಬಹುದಾಗಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ತಮ್ಮ ಅವಗಾಹನೆಗೆ ತರುತ್ತಾ, ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ) ರವರ ಅಧಿಸೂಚನೆ ಸಂಖ್ಯೆ:ನಅಇ 424 ಎಂಎನ್‌ಜಿ 2018, ದಿನಾಂಕ:25-09-2018ರ ಅಧಿಸೂಚನೆ ಪತ್ರವನ್ನು ಹಾಗೂ ಡಾ॥ ಬಿ.ವೈ.ನಂದ, ವೈದ್ಯಾಧಿಕಾರಿ ರವರು ಸಲ್ಲಿಸಿರುವ ಹಾಜರಾತಿ ಪತ್ರವನ್ನು ಕಡತದಲ್ಲಿರಿಸಿ, ಸದರಿಯವರನ್ನು ಎರಡು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಪಾಲಿಕೆಗೆ ನಿಯೋಜಿಸುವ ಬಗ್ಗೆ ಕಡತವನ್ನು ಮಾಹಿತಿ / ಅಭಿಪ್ರಾಯಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

**ತೀರ್ಮಾನ:**

ಸರ್ಕಾರದ ದಿನಾಂಕ:11-11-2011ರ ನಿಯೋಜನಾ ನೀತಿಯಲ್ಲಿನ ಅಂಶಗಳ ಪ್ರಕಾರ ಸದರಿ ವೈದ್ಯಾಧಿಕಾರಿಗಳನ್ನು ನಿಯೋಜಿಸಿರುವ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಬಹುದೆಂಬ ಅಭಿಪ್ರಾಯದೊಂದಿಗೆ ಮಾನ್ಯ ಆಯುಕ್ತರು ರವರ ದಿನಾಂಕ: 22-09-2018ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.

## ವಿಷಯದ ಸಂಖ್ಯೆ:ಸಿಆಸುಸ್ಥಾಸ/ವಿ.ಸಂ/43/2018-19

ಆಯುಕ್ತರವರ ದಿನಾಂಕ:23-10-2018ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ:ನಅಇ 230 ಎಂಎನ್‌ಜಿ 2018, ದಿನಾಂಕ:21-08-2018 ರಲ್ಲಿ ಶ್ರೀ ಷಣ್ಮುಖಪ್ಪ. ಎಂ.ಹೆಚ್. ಸಹಾಯಕ ಅಭಿಯಂತರರು ಇವರನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಎರವಲು ಸೇವೆಯ ಮೇಲೆ ಮರುಸ್ಥಳ ನಿಯುಕ್ತಿಗೊಳಿಸಿ ಆದೇಶಿಸಲಾಗಿತ್ತದೆ.

ಶ್ರೀ ಷಣ್ಮುಖಪ್ಪ. ಎಂ.ಹೆಚ್. ಸಹಾಯಕ ಅಭಿಯಂತರರು ಇವರು ದಿನಾಂಕ:21-08-2018 ರಂದು ಪಾಲಿಕೆಯಲ್ಲಿ ಮನವಿ ಸಲ್ಲಿಸಿ, ಬೊಮ್ಮನಹಳ್ಳಿ ವಲಯದ ಯಾವುದಾದರೂ ಉಪ ವಿಭಾಗದಲ್ಲಿ ಸ್ಥಳನಿಯುಕ್ತಿಗೊಳಿಸಲು ಕೋರಿ ಮನವಿ ಸಲ್ಲಿಸಿರುತ್ತಾರೆ.

ಶ್ರೀ ಷಣ್ಮುಖಪ್ಪ. ಎಂ.ಹೆಚ್. ಸಹಾಯಕ ಅಭಿಯಂತರರು ಇವರನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಎರವಲು ಸೇವೆಯ ಮೇಲೆ ನಿಯೋಜಿಸುವ ಸರ್ಕಾರದ ನಗರಾಭಿವೃದ್ಧಿ ಇಲಾಖೆಗೆ ಅಭಿಪ್ರಾಯ ನೀಡಿರುವುದಿಲ್ಲ.

ಪಾಲಿಕೆಯಲ್ಲಿ 291 ಸಹಾಯಕ ಅಭಿಯಂತರರ ಮಂಜೂರಾತಿ ಹುದ್ದೆಗಳಿದ್ದು, ಪ್ರಸ್ತುತ ಪಾಲಿಕೆಯಲ್ಲಿ 160 ಮಂದಿ ಎರವಲು ಸೇವೆಯ ಮೇಲೆ ಮತ್ತು 125 ಮಂದಿ ಪಾಲಿಕೆ ಅಭಿಯಂತರರುಗಳು ಸೇರಿ ಒಟ್ಟು 285 ಮಂದಿ ಸಹಾಯಕ ಅಭಿಯಂತರರುಗಳು ಕಾರ್ಯನಿರ್ವಹಿಸುತ್ತಿರುತ್ತಾರೆ.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆಯಲ್ಲಿ ಶ್ರೀ ಷಣ್ಮುಖಪ್ಪ. ಎಂ.ಹೆಚ್. ಸಹಾಯಕ ಅಭಿಯಂತರರು ಇವರನ್ನು ಪಾಲಿಕೆಗೆ ಎರವಲು ಸೇವೆಯ ಮೇಲೆ ನಿಯೋಜಿಸಿ ಆದೇಶಿಸಿದ್ದು, ಈ ಸಂಬಂಧ ಕಡತವನ್ನು ಮಾಹಿತಿ / ಅಭಿಪ್ರಾಯಕ್ಕಾಗಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ತೀರ್ಮಾನ:**

ಸರ್ಕಾರದ ದಿನಾಂಕ:11-11-2011ರ ನಿಯೋಜನಾ ನೀತಿಯಲ್ಲಿನ ಅಂಶಗಳ ಪ್ರಕಾರ ಸದರಿ ಸಹಾಯಕ ಅಭಿಯಂತರರನ್ನು ನಿಯೋಜಿಸಿರುವ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಬಹುದೆಂಬ ಅಭಿಪ್ರಾಯದೊಂದಿಗೆ ಮಾನ್ಯ ಆಯುಕ್ತರು ರವರ ದಿನಾಂಕ:22-09-2018ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.

ಅಧ್ಯಕ್ಷರು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ

**ಅಧ್ಯಕ್ಷರು**
**ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ**

**ಪ್ರತಿಯನ್ನು:**

1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
3. ಮಾನ್ಯ ಆಯುಕ್ತರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ
4. ಆಡಳಿತ ಪಕ್ಷದ ನಾಯಕರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ
5. ವಿರೋಧ ಪಕ್ಷದ ನಾಯಕರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ
6. ಜೆ.ಡಿ.ಎಸ್.ಪಕ್ಷದ ನಾಯಕರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ
7. ಎಲ್ಲಾ ಸ್ಥಾಯಿ ಸಮಿತಿ ಅಧ್ಯಕ್ಷರವರುಗಳ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ
8. ಸಮಿತಿಯ ಎಲ್ಲಾ ಸದಸ್ಯರುಗಳಿಗೆ
9. ಅಪರ ಆಯುಕ್ತರು (ಆಡಳಿತ) ರವರಿಗೆ
10. ಕೌನ್ಸಿಲ್ ಕಾರ್ಯದರ್ಶಿರವರಿಗೆ
11. ಕಾನೂನು ಕೋಶ ಮುಖ್ಯಸ್ಥ ರವರಿಗೆ
12. ಉಪ ಆಯುಕ್ತರು (ಆಡಳಿತ) ರವರಿಗೆ
13. ಮಾಹಿತ ತಂತ್ರಜ್ಞಾನ ಸಲಹೆಗಾರರವರಿಗೆ ಕಳುಹಿಸುತ್ತಾ ಸದರಿ ನಡವಳಿಯನ್ನು ಅಂತರ್ಜಾಲದಲ್ಲಿ ಪ್ರಕಟಿಸಲು ತಿಳಿಸಿದೆ
14. ಕಛೇರಿ ಪ್ರತಿ